ಅವರ ಬರವಣಿಗೆಯು ಕಾವ್ಯದ ಭಿತ್ತಿಯ ಮೇಲೆಯೇ ರೂಪುಗೊಂಡಿದೆ. ಹಾಗಾಗಿ ಪ್ರಸ್ತುತ ಲೇಖನವನ್ನು ಅವರ ಕಾವ್ಯಕ್ಕೆ ಸೀಮಿತಗೊಳಿಸಿದ್ದೇನೆ.

ಎಚ್‌ಎಸ್‌ವಿ ಅವರ ಜೊತೆಗಿನ ನನ್ನ ಮೊದಲ 'ಕಾವ್ಯ-ಕಾರಣ' ಭೇಟಿಯ ಅನುಭವದಿಂದಲೇ ಮನಸ್ಸು ಅವರ ಕವಿತೆಗಳಲ್ಲಿ ನೆಲೆಗೊಳ್ಳುವುದು ಸರಿಯೆನಿಸುತ್ತದೆ: 2010ರಲ್ಲಿ ಎಂದು ನೆನಪು... ನಮ್ಮೂರು ಹಾಸನದ ಪೊರೆ ಕಳಚಿಕೊಂಡು ಬೆಂಗಳೂರಿನ ಸಾಹಿತ್ಯ ವಲಯದಲ್ಲಿ ನಾನು ಅಂಬೆಗಾಲಿಡುತ್ತಿದ್ದ ದಿನಗಳವು. 'ಅಭಿನವ' ರವಿಕುಮಾರ್ ಅವರು ಆಯೋಜಿಸಿದ್ದ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಪರಿಚಿತರು ಯಾರೂ ಇಲ್ಲದೆ ಇದ್ದ ಕಾರಣ ಒಬ್ಬಳೇ ಸಭಾಭವನದಲ್ಲೆಲ್ಲೋ ಕುಳಿತಿದ್ದೆ. ನನ್ನ ಬೆನ್ನುಕಡೆಗಿದ್ದ ಬಾಗಿಲಿನಿಂದ ಯಾರೋ 'ಜ.ನಾ. ತೇಜಶ್ರೀ ಬಂದಿದ್ದಾರಾ?... ಅವರನ್ನ ನೋಡಬೇಕಲ್ಲ...' ಅಂದದ್ದು ಕೇಳಿಸಿ ನಾನು ಹಿಂತಿರುಗಿ ನೋಡಿದರೆ, ಎಚ್‌ಎಸ್‌ವಿ ಅವರೊಂದಿಗಿದ್ದ ರವಿಕುಮಾರ್ ಅವರು ನನ್ನತ್ತ ಕೈಮಾಡಿ ತೋರಿಸಿ, 'ಅಲ್ಲೇ ಇದ್ದಾರೆ ಸರ್' ಎಂದರು. ನಮ್ಮ ಮನೆಯ ಟೇಪ್ ರೆಕಾರ್ಡರಿನಲ್ಲಿ ಹಾಡುತ್ತಿದ್ದ, ಟೀವಿಯಲ್ಲಿ ಮೊಳಗುತ್ತಿದ್ದ, ನಾನು ಆಗೀಗ ಭಾವಗೀತೆ ಸ್ಪರ್ಧೆಯಲ್ಲಿ ಹಾಡುತ್ತಿದ್ದ ಹಾಡುಗಳ ಮತ್ತು ಪತ್ರಿಕೆಯಲ್ಲಿ ಮಾತ್ರ ನೋಡುತ್ತಿದ್ದ, ಓದುತ್ತಿದ್ದ ಕವಿತೆಗಳ ಜನ್ಮದಾತ ಎಚ್‌ಎಸ್‌ವಿ ನನ್ನನ್ನೇ ನೋಡುತ್ತಿದ್ದಾರೆ, ತುಂಬು ನಗುವಿನೊಂದಿಗೆ! ಅವರು ನನ್ನತ್ತ ಧಾವಿಸಿ ಬಂದು, ಕೈಕುಲುಕಿ 'ನಿಮ್ಮ ಕವಿತೆ, ಅನುವಾದಗಳನ್ನು ಓದಿದ್ದೇನೆ, ಆಹ್ವಾನ ಪತ್ರಿಕೆಯಲ್ಲಿ ಹೆಸರು ನೋಡಿ ನಿಮ್ಮನ್ನು ಕಾಣಲೇಬೇಕು ಅಂತ ಬಂದೆ' ಅಂದು, ಎಷ್ಟೋ ಕಾಲದಿಂದ ಪರಿಚಯವೇನೋ ಅನ್ನುವ ಅಕ್ಕರೆ, ಮಮತೆಯಲ್ಲಿ ಭುಜ ತಡವಿ, ಅವರ 'ಎಚ್ಚೆಸ್ವಿ ಸಮಗ್ರ ಕವಿತೆಗಳು' ಪುಸ್ತಕವನ್ನು ಕೊಟ್ಟರು. ಮೊದಲ ಪುಟದಲ್ಲಿ ಅವರ ಹಸ್ತಾಕ್ಷರದ ಜೊತೆಗೆ 'ಭವಿಷ್ಯದ ಕವಿ ತೇಜಶ್ರೀಗೆ' ಅಂತ ಬರೆದಿತ್ತು. ಅವರ ಈ ನೊಚ್ಚನೆ ಪ್ರೀತಿ, ನಂಬಿಕೆ, ವಿನಯವು ನನ್ನೊಳಗೆ ಕರಗತೊಡಗಿತು.

ಭಿನ್ನಾಭಿಪ್ರಾಯಗಳೇ ನಿಜವಾದ ಸಂಬಂಧದ ಅಡಿಗಲ್ಲು ತಾನೆ? ಅಂತದ್ದೊಂದು ಘಟನೆ ನೆನಪಾಗುತ್ತಿದೆ: 2018ರಲ್ಲಿ 'ಕನ್ನಡಪ್ರಭ' ಪತ್ರಿಕೆಗೆ ಗೋಪಾಲಕೃಷ್ಣ ಅಡಿಗರ ಕುರಿತು ಬರೆದ ಲೇಖನದಲ್ಲಿ ಅಡಿಗರ ಕಾವ್ಯವನ್ನು ಕುರಿತು ನಿಷ್ಠುರವಾಗಿ ನನಗನ್ನಿಸಿದ್ದನ್ನು ಹೇಳಲು ಯತ್ನಿಸಿದ್ದೆ. ಲೇಖನ ಪ್ರಕಟಗೊಂಡ ದಿನ ಬೆಳಬೆಳಗ್ಗೆ ಎಚ್‌ಎಸ್‌ವಿ ಅವರ ಕರೆ ಬಂದಿತು. ಎಂದಿನಂತೆ ನಾನು, 'ನಮಸ್ತೆ ಸರ್' ಅಂದೆ. ಅತ್ತ ಕಡೆಯಿಂದ ಸಿಟ್ಟು ದನಿಯ ಎಚ್‌ಎಸ್‌ವಿ ಅವರ ಪ್ರಶ್ನೆ, 'ಅಲ್ಲಮ್ಮಾ ನೀನು ಹೀಗೆ ಬರೆದುಬಿಟ್ಟರೆ ಹೇಗೆ?' ನಾನು, 'ಯಾಕೆ ಸರ್, ಏನಾಯ್ತು? ನನ್ನ ಓದಿನ ಗ್ರಹಿಕೆಯಲ್ಲಿ ಅನ್ನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳಿದ್ದೀನಿ' ಅಂದೆ. ಅವರು ನನ್ನ ಲೇಖನದ ಈ ಸಾಲುಗಳನ್ನು ಓದತೊಡಗಿದರು: "ಅಡಿಗರ ಮುಖ್ಯ 'ನವ್ಯ'ಕವಿತೆಗಳಲ್ಲಿ ಮಾಂಸಲವಾದ, ಐಂದ್ರಿಯಿಕವಾದ ಪ್ರತಿಮಾನಿರ್ಮಾಣದ ಶಕ್ತಿಯಿದೆ. ಆದ್ದರಿಂದಲೇ ಅವರ ಕವಿತೆಗಳು ಕಣ್ಣು, ಕಿವಿಗೆ ಮಾಂತ್ರಿಕ ಎನಿಸುವ ಅನುಭವ ಕೊಡುತ್ತವೆ. 'ಹದ್ದು', 'ಕೃಷ್ಣನ ಕೊಳಲು', 'ಕೂಪಮಂಡೂಕ' ಮುಂತಾದ ಕವಿತೆಗಳಲ್ಲಿ ಇಂತಹ ಹಲವು ಭಾಗಗಳನ್ನು ಕಾಣಬಹುದು. ಆದರೆ ಮತ್ತೆ ಮತ್ತೆ ಓದಿದಾಗ ಇವೇ ಕವಿತೆಗಳು ಮೋಹಕವಾದ ಒಗಟುಗಳಂತೆ ಕಾಣಿಸುತ್ತವೆ. ಕೆಲವು ಭಾಗಗಳಲ್ಲಿ ಮರುಳುಮಾಡುವ ಈ ಕವಿತೆಗಳು ಒಟ್ಟಂದದಲ್ಲಿ ಏನನ್ನೂ ಬಿಟ್ಟುಕೊಡುವುದಿಲ್ಲ. 'ಅರ್ಥ ಇರುವ ಹಾಗೆ' ಬರೆಯ ಬಯಸುವುದಕ್ಕೂ, ಓದುಗರಲ್ಲಿ ಹೊಸ 'ಅರ್ಥಗಳು ಸಂಭವಿಸು'ವಂತೆ ಆಗುವ ಕವಿತೆಗೂ ಇರುವ ವ್ಯತ್ಯಾಸ ಬಹುಶಃ ಇಲ್ಲೇ ಎಲ್ಲೋ ಇದೆ". ಇಷ್ಟನ್ನು ಅವರು ಅದೇ ಸಿಟ್ಟು ದನಿಯಲ್ಲಿ ಓದಿ, ಸುಮ್ನೆ ಹೀಗೆ ಸ್ಟೇಟ್‌ಮೆಂಟ್ ಕೊಟ್ರೆ ಆಗಲ್ಲಮ್ಮ, ವಿವರಿಸಬೇಕು ಅಂದರು. ನಾನು 'ಸರ್, ಪದಗಳ ಮಿತಿಯ ಕಾರಣ ಸೂಚಿಸಿ ಬರೆದಿದ್ದೇನೆ ಅಷ್ಟೆ. ಜವಾಬ್ದಾರಿಯಿಂದಲೇ ಪ್ರತಿ ಪದವನ್ನೂ ನಾನು ಬರೆದಿರೋದು, ಸುಮ್ನೆ ಹಾಗೆಲ್ಲ ಎಂದೂ ಬರೆದಿಲ್ಲ. ಸಮಯ ಬಂದಾಗ ಖಂಡಿತ ಇದರ ಬಗ್ಗೆ ವಿವರವಾಗಿ ಬರೀತೀನಿ. ಅಷ್ಟಕ್ಕೂ ನೀವು ಬೆಳಬೆಳಗ್ಗೆ ಇಷ್ಟೊಂದು ಸಿಟ್ಟಾಗಿ ಮಾತಾಡುವಂಥದ್ದು ಏನಾಯ್ತು ಅಂತ ನಂಗೆ ಅರ್ಥ ಆಗ್ತಿಲ್ಲ ಸರ್. ಇದನ್ನ ನಾವು ಚರ್ಚೆ ಮಾಡಬಹುದಲ್ವ?' ಅಂದೆ. ಅದೇನನ್ನಿಸಿತೋ ಅವರಿಗೆ, ಕ್ಷಣದಲ್ಲಿ ಅವರ ಏದುಸಿರಿನ ದನಿ ಸಹಜವಾಯಿತು, 'ನಿಜ ತೇಜಶ್ರೀ, ನಂಗೆ ಇದನ್ನು ಓದಿ ಸಿಟ್ಟು ಬಂತು... ಹೌದು, ನಾವು ಇದರ ಬಗ್ಗೆ ಮಾತಾಡಬಹುದು.